ಪ್ರಧಾನ ದಿವಾಣಿ ನ್ಯಾಯಾಧೀಶರು  ಮತ್ತು  ಜೆ.ಎಮ್.ಎಫ್.ಸಿ ನ್ಯಾಯಾಲಯ, ಗಜೇಂದ್ರಗಡ

ಸಿ ಸಿ ನಂಬರ :802/2019

CW-8     PW-8

| | |
|---|---|
| ಹೆಸರು | : ಗಜಾನನ ಕಬಾಡಿ |
| ತಂದೆ  ಹೆಸರು | : ಯಲ್ಲಪ್ಪ ಕಬಾಡಿ |
| ವಯಸ್ಸು | : 45 ವರ್ಷ |
| ಉದ್ಯೋಗ | : ಖಾಸಗಿ ಉದ್ಯೋಗಿ |
| ವಾಸಸ್ಥಳ | : ಗಜೇಂದ್ರಗಡ |

---

ಸಾಕ್ಷಿಯನ್ನು ಸತ್ಯ  ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 15.04.2026 ರಂದು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ನಮ್ಮ ಮೊಬೈಲ್ ಶಾಪ್ ಗಜೇಂದ್ರಗಡದ ಕೆನರಾ ಬ್ಯಾಂಕ್ ಹತ್ತಿರ ಇರುತ್ತದೆ. ಚಾಸಾ.1 ನಮ್ಮ ಬಾಜು ಅಂಗಡಿಯವರು ಇದ್ದು, ಅವರು ನನಗೆ ಪರಿಚಯ. ನಮ್ಮ ಅಂಗಡಿಯ ಹೆಸರು ಗಜಾನನ ಮೊಬೈಲ್ ಸರ್ವೀಸ್ ಇರುತ್ತದೆ. ಪ್ರತಿದಿನ ನಮ್ಮ ಅಂಗಡಿಯನ್ನು ಬೆಳಿಗ್ಗೆ 10.30 ಗಂಟೆಗೆ ತೆರೆದು ರಾತ್ರಿ 09.00 ಗಂಟೆಗೆ ಮುಚ್ಚುತ್ತೇವೆ. ಚಾಸಾ.1 ರವರ ಅಂಗಡಿಯ ಹೆಸರು ಕಾಲಕಾಲೇಶ್ವರ ಫ್ರೆಂಡ್ಸ ಬಾರ್ ಇರುತ್ತದೆ. ಸುಮಾರು 5-6 ವರ್ಷಗಳ ಹಿಂದೆ ನಾನು ಮುಂಜಾನೆ 10.30 ಗಂಟೆ ಸುಮಾರಿಗೆ ನಮ್ಮ ಅಂಗಡಿಗೆ ಹೋದಾಗ ನಮ್ಮ ಅಂಗಡಿಗೆ ಹೊಂದಿಕೊಂಡು ಇದ್ದ ಸದರಿ ಬಾರ್ ಹತ್ತಿರ ಮ್ಯಾನೇಜರ್, ಓನರ್ ಮತ್ತು ಪೊಲೀಸರು ಇದ್ದರು. ಜನರು ಸಹ ಸೇರಿದ್ದರು. ಸದರಿ ಬಾರ್ ನ ಚಾವಿ ಮುರಿದಿತ್ತು. ಸೆಟ್ರಸ್ ಅನ್ನು ಓಪನ್ ಮಾಡಿದ್ದರು. ನಾನು ವಿಚಾರಿಸಲಾಗಿ ಸದರಿ ಬಾರ್ ನ ಮ್ಯಾನೇಜರ್ ಆದ ಚಾಸಾ.1 ರವರು ತಮ್ಮ ಬಾರ್ ನಲ್ಲಿ ರಾತ್ರಿ ಕಳುವಾಗಿದೆ ಎಂದು ತಿಳಿಸಿರುತ್ತಾರೆ. ಸದರಿ ಬಾರ್ ನ ಓನರ್ ಹೆಸರು ಗಂಗಾಧರ ಸಿಂಗಾಡಿ ಮತ್ತು ಪರಶುರಾಮ ಸಿಂಗಾಡಿ ಇರುತ್ತದೆ.  ಪೊಲೀಸರು ಸಹಿ ಮಾಡು ಎಂದು ಹೇಳಿದ್ದಕ್ಕೆ ನಾನು ಸಹಿ ಮಾಡಿದ್ದೇನೆ. ಇಷ್ಟನ್ನು ಹೊರತುಪಡಿಸಿ ಬೇರೆ ನನಗೆ ಈ ಪ್ರಕರಣದ ಬಗ್ಗೆ ಏನು ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು).

**<u>ಪಾಟೀ ಸವಾಲುಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ:</u>**

ದಿಃ 31.07.2018 ಮತ್ತು 01.08.2018 ರ ನಡುವಿನ ಮಧ್ಯರಾತ್ರಿ 02.45 ಗಂಟೆ ಸಮಯದಲ್ಲಿ ಯಾರೋ ಕಳ್ಳರು ಕಾಲಕಾಲೇಶ್ವರ ಫ್ರೆಂಡ್ಸ್ ಅಸೋಸಿಯೇಷನ್ ಬಾರ್ ನ ಸೆಟ್ರಸ್ ಮುರಿದು ಒಳಗಡೆ ಹೋಗಿ ಹಣ ಕಳ್ಳತನ ಮಾಡಲು ಪ್ರಯತ್ನಿಸಿದ್ದು, ಆ ಬಗ್ಗೆ ಸದರಿ ಬಾರ್ ನ ಮ್ಯಾನಜೇರ್ ಆದ ಚಾಸಾ.1 ರವರು ದೂರು ನೀಡಿದ ಬಗ್ಗೆ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಆ ದಿನ ರಾತ್ರಿ ನಮ್ಮ ಅಂಗಡಿ ಬಾಜು ಇದ್ದ ಸದರಿ ಸೆಟ್ರಸ್ ನ ಶಬ್ದ ಬಂದಾಗ ನಮ್ಮ ಅಂಗಡಿ ಶಬ್ದ ಎಂದು ಯಾರು ನನಗೆ ಮಧ್ಯರಾತ್ರಿ 02.30 ಗಂಟೆ ಸುಮಾರಿಗೆ ಫೋನ್ ಮಾಡಿ ತಿಳಿಸಿದರು ಎಂದರೆ ಸರಿಯಲ್ಲ. ಆಗ ನಾನು ನಮ್ಮ ಅಂಗಡಿಯ ಹತ್ತಿರ ಹೋಗಿ ನೋಡಲಾಗಿ ನಮ್ಮ ಅಂಗಡಿಯ ಸೆಟ್ರಸ್ ಏನು ಆಗಿರಲಿಲ್ಲ, ಪಕ್ಕದ ಬಾರ್ ನ ಸೆಟ್ರಸ್ ಮುರಿದು ಲಾಕ್ ಓಪನ್ ಆಗಿತ್ತು ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ.1 ರವರು ನೊಡಲಾಗಿ ಅವರ ಬಾರ್ ನ ಲಾಕ್ ನ ಕೊಂಡಿಗಳು ಮಣಿದಿದ್ದು ಸೆಟ್ರಸ್ ಅರ್ಧ ಓಪನ್ ಆಗಿತ್ತು ಎಂದರೆ ಸರಿಯಲ್ಲ. ನಂತರ ನಾವು ಒಳಗಡೆ ಹೋಗಿ ನೋಡಲಾಗಿ ಗಲ್ಲಾಪೆಟ್ಟಿಗೆ ಓಪನ್ ಆಗಿತ್ತು, ಆದರೆ ಅಲ್ಲಿ ಹಣ ಇರಲಿಲ್ಲ. ಕಳ್ಳರು ಹಣ ಕದಿಯಲು ಪ್ರಯತ್ನಿಸಿದ್ದರು ಎಂದರೆ ಸರಿಯಲ್ಲ. ಆ ಕುರಿತು ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ನಂತರ ಪೊಲೀಸರು ನಮ್ಮನ್ನು ಕಳ್ಳತನ ಮಾಡಿದವರು ಸಿಕ್ಕಿದ್ದಾರೆ ಎಂದು ಹೇಳಿ ಪೊಲೀಸ್ ಠಾಣೆಗೆ ಕರೆಸಿದ್ದರು ಎಂದರೆ ಸರಿಯಲ್ಲ. ಆಗ ಆರೋಪಿತರು ಇಬ್ಬರು ಮತ್ತು ಇನ್ನು ಇಬ್ಬರು ಒಟ್ಟು 4 ಜನರು ಸೇರಿ ಸದರಿ ಬಾರ್ ನಲ್ಲಿ ಕಳ್ಳತನ ಮಾಡಲು ಪ್ರಯತ್ನಿಸಿದೇವು ಎಂದು ಒಪ್ಪಿಕೊಂಡರು ಎಂದರೆ ಸರಿಯಲ್ಲ. ಅವರ ತಮ್ಮ ಹೆಸರು ವೆಂಕಟೇಶ ವೆಂಕಟರಾಮ ಮತ್ತು ಚಕ್ರವರ್ತಿ ಊರ್ಫ ಚಂದ್ರು ಬಸವನಾಯ್ಕ ಎಂದು ತಿಳಿಸಿದರು ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಷಯ ಗೊತ್ತಿದ್ದರು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಸದರಿ ಒಪ್ಪದ ಹೇಳಿಕೆ ಮತ್ತು ಪುನಃ ಹೇಳಿಕೆಯನ್ನು ನಿ.ಪಿ.7 ಮತ್ತು 8 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು : ಶ್ರೀ.ಎಸ್.ಬಿ.ಹೆಚ 1 ನೇ ಆರೋಪಿಯ ಪರ ವಕೀಲರಿಂದಃ</u>**

ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

**ಮರುವಿಚಾರಣೆ ಇಲ್ಲಃ**

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು )**

ಓ.ಹೇ.ಕೇ. ಸರಿ ಅದೆ.

(ಹುಲುಗಪ್ಪ. ಡಿ )
ಪ್ರಧಾನ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ
ನ್ಯಾಯಾಧೀಶರು ಗಜೇಂದ್ರಗಡ.